ಕಾವೇರಿ ಕಣಿವೆಯಂಡಿಯಲ್ಲಿನ ಯೋಜನೆಗಳು

ಶ್ರೀ. (ಎ) ಶ್ರೀಮತಿ ಮಂಜುಳಾರನ್ನಿಸ್ವಾ.—ಮಾನ್ಯ ಲೋಕೋಪಯೋಗಿ ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಕಾವೇರಿ ಕ್ಷೇತ್ರದಲ್ಲಿ ನೀರಾವರಿಗೆ ಒಳಪಡುವ ಭೂವಿಯ ನಕ್ಷೆಯನ್ನು ತಯಾರಿಸಿದೆಯೇ?

ಆ) ಹಾಗಿದ್ದಲ್ಲಿ, ಯೋಜನೆಗಳ ಹೆಸರು ಮಂತ್ತು ಅವುಗಳ ನಿಧಿ ವಿಭಜನಾ ವಿವರಗಳನ್ನು ಕೊಡಂವುದು?

ಇ) ವರುಣಾ ನಾಲಾ ಯೋಜನೆಯನ್ನು ಪೂರ್ತಿಗೊಳಿಸಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು, ೭ನೇ ಪಂಚವಾರ್ಷಿಕ ಯೋಜನೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಗುರಿಪಡಿಸಿರುವ ನೀರಾವರಿ ಸಾಮರ್ಥ್ಯವನ್ನು ಸಾಧಿಸಲು ಅಂದಾಜು ಪಟ್ಟಿಯನ್ನು ಮತ್ತು ನಕ್ಷೆಯನ್ನು ತಯಾರಿಸಲಾಗಿದೆ.

ಆ) ವಿವರಣಾ ಪಟ್ಟಿಯನ್ನು ಲಗತ್ತಿಸಲಾಗಿದೆ.

ಇ) ವರುಣಾ ನಾಲೆಯ ಯೋಜನೆಯ ಪರಿಷ್ಕೃತ ಅಂದಾಜು ಪೊತ್ತವಾದ ೫೮.೧೦ ಕೋಟಿ (೧೯೮೫-೮೬ರ ದರ ಪಟ್ಟಿ) ರೂ.ಗಳಿಂದ ೩೨,೩೭೫ ಹೆಕ್ಟೇರ್ ನೀರಾವರಿ ಪ್ರದೇಶಕ್ಕೆ ಬದಲಾಗಿ ೫ದುವರೆಗೂ ಸುಮಾರು ೧೧.೨೦ಕೋಟಿ ಖರ್ಚು ಮಾಡಿ ೩೯೫ ಹೆಕ್ಟೇರ್ ಪ್ರದೇಶಗಳಿಗೆ ನೀರಾವರಿ ಸಾವರ್ಥ್ಯ ಸಾಧಿಸಲಾಗಿದೆ.

೧೯೮೬-೮೭ನೇ ಸಾಲಿನಲ್ಲಿ ೨.೫೦ಕೋಟಿ ರೂ.ಗಳು ಒದಗಿಸಲಾಗಿದೆ. ಈ ಯೋಜನೆಯನ್ನು ೯ನೇ ಪಂಚವಾರ್ಷಿಕ ಯೋಜನೆಯಲ್ಲಿ ಪೂರ್ಣಗೊಳಿಸಲು ನಿರೀಕ್ಷಿಸಲಾಗಿದೆ.

Statement showing the details of

PROJECT WISE ALLOCATION DURING 7TH PLAN IN CAUVERY BASIN.

Sl. No.	Programme/Scheme	Proposed outlay (Rs. in lakhs)	Potential Programme (in Hectares)
I.	PLAN PROJECTS;		
A)	MAJOR PROJECTS		
1.	KRS Modernisation	1000	—
B)	MEDIUM PROJECTS;		
2.	Manchanabele	600	3850
3.	Taraka	86	3060
4.	Votehole	188	5330
	TOTAL (I)	1874	12240

II. UN-APPROVED PROJECTS

A)	Major Projects		
1.	Harangi	4726	23,110
2.	Hemavathy	18852	60,000
3.	Kabini	2321	12,940
4.	KRS RBC	1728	16,000
5.	Yagachi	870	—
	TOTAL-A	28497	112,050
B.	MEDIUM PROJECTS;		
6.	Arkavathy	2126	6230
7.	Chiklihole	426	2750
8.	Iggalur	809	2720
9.	Nallur Amanikere	64	294
10,	Uduthorehalla	1000	4000
11.	Chickahole Diversion	58	—
12.	Changawadi	20	—
	TOTAL-B	4503	15,994
	Total unapproved	33000	1,28,044
	TOTAL (PLAN+UNAPPROVED)	34874	1,40,284

SMT. MUKTARUNNISA.—I would like to know from the Hon'ble Minister for Public Works as to when this estimate was prepared and when it is going to be implemented? This particular work is mentioned as "un-approved plan". When it is going to be mentioned as the "approved plan? Please also clarify as to when the money will be released. This is my first ques ion. The second question is about Varuna Canal. I am going on asking from the Ist Session on this because I am from Mysore. Our Hon. Minister Mr. B mmai had conducted a meeting at DC's office and he said then that they are going to take at it up very fastly and at that time a few labourers were appointed on daily wages. At the same time, I had put objections that when the labourers from Karnataka were available, the contractors were bringing labourers from Tamilnadu and Andhra Pradesh. Unfortunately, it is mentioned here that they have spent 11.20 crores etc. What is the budget you have spent in 1983-84, and 1984-85?

For this year it is mentioned that 2,50 crores would be spent. When you mention here like that, compared to Hemavathi Project work, Varuna Canal work is very very slow. Why it is going on like that Is there any dispute?

ಶ್ರೀ ಹೆಚ್.ಡಿ. ದೇವೇಗೌಡ.—ಸ್ವಾಮಿ, ವರುಣಾ ನಾಲೆಯ ಅಂದಾಜು ವೆಚ್ಚವನ್ನು ೧೯೭೬-೭೭ ರಲ್ಲಿ ೧೮ ಕೋಟಿ ಎಂದು ತಯಾರು ಮಾಡಲಾಗಿತ್ತು. ಇದರ ಪೂರ್ವ ಇತಿಹಾಸವನ್ನು ಸಭೆಯಲ್ಲಿ ಹೇಳಬೇಕಾದ ಅವಶ್ಯಕತೆ ಇಲ್ಲ. ಈಗ ಪುನರ್ವಿಮರ್ಶಿತ ಅಂದಾಜು ೫೮ ಕೋಟಿ ಮಾಡಲಾಗಿದೆ. ಕಳೆದ ಮೂರೂ ವರ್ಷಗಳಲ್ಲಿ ೧೧ ಕೋಟಿ ರೂಪಾಯಿನಲ್ಲಿ ೮ ಕೋಟಿ ರೂಪಾಯಿಗಳನ್ನು ಖರ್ಚು ಮಾಡ ಲಾಗಿದೆ. ನಾನು ಆಪಾದನೆ ಮಾಡುವುದಕ್ಕೆ ಹೋಗುವುದಿಲ್ಲ. ೧೯೭೯ ರಿಂದ ೮೩ ಜನವರಿ ವರೆಗೆ ಕೇವಲ ಮೂರೂವರೆ ಕೋಟಿ ಮಾತ್ರ ಖರ್ಚು ಮಾಡಲಾಗಿತ್ತು. ಈ ವರ್ಷ ಎರಡೂವರೆ ಕೋಟಿ ರೂಪಾಯಿಗಳನ್ನು ಇಡಲಾಗಿದೆ. ಇಟ್ಟಿರತಕ್ಕ ಹಣ ಕಡಿಮೆ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಹೆಚ್ಚು ಹಣ ಕೊಡುವ ಬಗ್ಗೆ ಪರಿಶೀಲನೆ ಮಾಡಲಾಗುವುದು. ಕಂಟ್ರಾಕ್ಟ್‌ದಾರರು ಆಂಧ್ರ ಮತ್ತು ತಮಿಳುನಾಡಿನಿಂದ ಕಾರ್ಮಿಕರನ್ನು ತೆಗೆದುಕೊಂಡು ಬಂದಿದ್ದಾರೆಂದು ಹೇಳಿದರು, ಕೆಲವು ಕೆಲಸಗಳಿಗೆ ನಮ್ಮವರು ಹೋಗುವುದಿಲ್ಲ. ಆಂಧ್ರದವರು ಮಾಡುವಂಥ ಕೆಲಸವನ್ನು ನಮ್ಮವರು ಮಾಡುವುದಿಲ್ಲ.

ಶ್ರೀಮತಿ ಮುಂಕ್ತರುನ್ನಿಸಾ.—ಅಂದರೆ, ಕರ್ನಾಟಕದ ಜನ ಫಿಸಿಕಲಿ ವೀಕಾಗಿದ್ದಾರೆಯೇ?

ಶ್ರೀ ಹೆಚ್.ಡಿ. ದೇವೇಗೌಡ.—ಆಂಧ್ರದ ಹೆಣ್ಣು ಮಕ್ಕಳು ಚಾಪಡಿ ಮೇಲೆ ಕಲ್ಲು ಹೊರುತ್ತಾರೆ. ನಾನು ಕಂಟ್ರಾಕ್ಟರ್ ಕೆಲಸದ ದೋಷದಿಂದಾಗಿ ಅವರಿಗೆ ಕೊಟ್ಟ ಕೆಲಸವನ್ನು ರದ್ದು ಮಾಡಿಸಿ ನಿರ್ಣಯ ಮಾಡಿದ್ದೇವೆ, ಇದಕ್ಕೂ ಕೆಲವೊಂದು ಕಾನೂನುಗಳು ಅಡ್ಡಿ ಬರುತ್ತಿವೆ. ಕಾವೇರಿ ಬೇಸಿನಲ್ಲಿ ಬರತಕ್ಕ ೨೨ ಯೋಜನೆಗಳನ್ನು ಬಿಟ್ಟರೆ ಉಳಿದೆವೆಲ್ಲವುಗಳು ನಾನ್ ಪ್ಲಾನ್‌ನಲ್ಲಿಯೇ ಬರತಕ್ಕ ಯೋಜನೆಗಳಾಗಿವೆ. ಎರಡೂ ರಾಜ್ಯಗಳ ವಿವಾದ ಇರುವುದರಿಂದ ಪ್ಲಾನ್‌ನಲ್ಲಿ ಸೇರಿಸುವುಕ್ಕೆ ಅವಕಾಶ ಕೊಟ್ಟಿಲ್ಲ. ಸದರಿ ಯೋಜನೆಗಳನ್ನು ಪ್ಲಾನ್‌ನಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡಲಾಗುತ್ತಿದೆ.

ಕಬಿನಿ ಎರಡನೆಯ ಹಂತದ ನೀರಾವರಿ ಯೋಜನೆ

೩೩೬ ಶ್ರೀ ಎಂ. ಶಿವಣ್ಣ, (ಹೆಗ್ಗಡ ದೇವನ ಕೋಟೆ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶ ಅಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವ ರ್ಷ ?

ಅ) ಕಬಿನಿ ಎರಡನೇ ಹಂತದ ಯೋಜನೆಯನ್ನು ಕೈಕೊಳ್ಳಲು ಸರ್ಕಾರದವರು ಉದ್ದೇಶಿಸಿ ದ್ದಾರೆಯೇ?

ಆ) ಹಾಗಿದ್ದಲ್ಲಿ, ಅದರ ಅಂದಾಜು ವೆಚ್ಚವೆಷ್ಟು ಹಾಗೂ ಈ ಯೋಜನೆಯಿಂದ ನೀರಾವರಿ ಯಾಗುವ ಅಚ್ಚುಕಟ್ಟು ಪ್ರದೇಶವೆಷ್ಟು?

ಇ) ಈ ಯೋಜನೆಯಿಂದ ಯಾವ ತಾಲೂಕುಗಳಿಗೆ ಪ್ರಯೋಜನವಾಗುವುದು, ?

ಈ) ಈ ಯೋಜನೆಯಿಂದ ಮುಳುಗಡೆಯಾಗುವ ಕಂದಾಯ ಮತ್ತು ಅರಣ್ಯ ಭೂಮಿ ಎಷ್ಟು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹಿಂದೆ ಯೋಜಿಸಲಾಗಿದ್ದ ಕಬಿನಿ, ೨ನೇ ಹಂತವನ್ನು ಒಳಗೊಂಡ ಕ್ರೋಡಿಕೃತ ಕಬಿನಿ ಯೋಜನೆಯನ್ನು ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ.

ಆ) ಕ್ರೋಡಿಕೃತ ಕಬಿನಿ ಯೋಜನೆಯ ಅಂದಾಜು ವೆಚ್ಚ ೫೯೦ ಕೋಟಿ ರೂ.ಗಳು ಈ ಯೋಜನೆ ಯಿಂದ ನೀರಾವರಿಯಾಗಲಿರುವ ಅಚ್ಚು ಕಟ್ಟು ಪ್ರದೇಶ ೪,೪೭,೪೦೦ ಎಕರೆಗಳು (೧,೮೧,೦೫೪ ಹೆಕ್ಟೇರುಗಳು) ಮಿಶ್ರ ಬೆಳೆ.